ಕರ್ನಾಟಕಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಸಿಟಿಇ 05 ಡಿವಿಪಿ(1) 2022. 707

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ . ಬೆಂಗಳೂರು 560 001.
ದಿನಾಂಕ: 16-09-2022.

ಸುತ್ತೋಲೆ

ವಿಷಯ : ಕಾಲೇಜಿನ ಸಾಂಸ್ಥಿಕ ಯೋಜನಾ ಸಮಿತಿಯನ್ನು ರಚಿಸಿ ಕ್ರಿಯಾ ಯೋಜನೆಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಇಡಿ 33 ಹೆಚ್‌ಪಿಟಿ 2022, ದಿನಾಂಕ:14. 07. 2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನಿಂದ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ ಎಲ್ಲಾ ಶುಲ್ಕಗಳನ್ನು ಕೋಷ್ಟಕ -1 ರಲ್ಲಿನ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯ (Institutional Development Plan - IDP) ಸಮಿತಿಯನ್ನು ರಚಿಸಿ ಹಾಗೂ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಈ ಸಂಬಂಧ, ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ IDP ಸಮಿತಿಯನ್ನು ರಚಿಸಿ, ಕಾಲೇಜಿನಲ್ಲಿ ಸಂಗ್ರಹಿಸಲಾಗುವ ಶುಲ್ಕಗಳನ್ನು ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಆದ್ಯತೆಯ ಮೇರೆಗೆ ಈ ಕೆಳಕಂಡ ಮೂಲಭೂತ ಸೌಕರ್ಯಗಳಿಗೆ/ ನಿರ್ವಹಣೆ ಮುಂತಾದವುಗಳಿಗೆ ಬಳಸಿಕೊಳ್ಳಲು ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು.

- ಕಟ್ಟಡ ನಿರ್ವಹಣೆ /ದುರಸ್ಥಿ, ಶೌಚಾಲಯ ನಿರ್ವಹಣೆ, ಕಿಟಕಿ, ಬಾಗಿಲು ಮತ್ತು ವಿದ್ಯುತ್ ದುರಸ್ಥಿ, ಕಾಲೇಜು ಕಟ್ಟಡಗಳ ಸುಣ್ಣ ಬಣ್ಣ
- ಕುಡಿಯುವ ನೀರಿನ ಸೌಲಭ್ಯ
- ಪೀಠೋಪಕರಣಗಳ ಖರೀದಿ/ ದುರಸ್ಥಿ, ಪ್ರಯೋಗಾಲಯಗಳ ಉಪಕರಣಗಳ ಖರೀದಿ, ಇಂಟರ್‌ನೆಟ್ ಸೌಲಭ್ಯ
- ಗ್ರಂಥಾಲಯ ಪುಸ್ತಕ, ಪೀಠೋಪಕರಣ ಖರೀದಿ/ ದುರಸ್ಥಿ
- ಕ್ರೀಡಾ ಉಪಕರಣಗಳು
- ಕಾಲೇಜಿನಅವಶ್ಯಕತೆಗೆತಕ್ಕಂತೆಇತರೆ ವೆಚ್ಚಗಳು

ಮುಂದುವರೆದು ಸಿದ್ಧಪಡಿಸಿದ ಕ್ರಿಯಾಯೋಜನೆಯ ಮಾಹಿತಿಯನ್ನು E-MIS ನಲ್ಲಿ ಲಭ್ಯವಿರುವ Table ಗಳ ಎಲ್ಲಾ ಕಾಲಂಗಳಲ್ಲಿ ಭರ್ತಿ ಮಾಡಿ, Submit ಮಾಡುವುದು. ನಂತರ, Submit ಮಾಡಿರುವ ಮಾಹಿತಿಯನ್ನು, Download ಮಾಡಿಕೊಂಡು ಸದರಿ ಪ್ರತಿಯನ್ನು ಪ್ರಾಂಶುಪಾಲರ ಸಹಿಯೊಂದಿಗೆ Covering letter ನೊಂದಿಗೆ ಅಡಕಗೊಳಿಸಿ ಕಡ್ಡಾಯವಾಗಿ ದಿನಾಂಕ : 26.09.2022 ರ ಒಳಗೆ ಈ ಕಛೇರಿಗೆ ತಲುಪಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಸೂಚನೆ :

1. ಕಾಲೇಜಿನ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹಿಂದಿನ ವರ್ಷಗಳಲ್ಲಿ ಜಮಾ ಆಗಿ ಉಳಿಕೆ ಆಗಿರುವ ಮೊತ್ತ (ಸರ್ಕಾರಕ್ಕೆ ಸಲ್ಲಬೇಕಾದ ಬಡ್ಡಿ ಮೊತ್ತವನ್ನು ಹೊರತುಪಡಿಸಿ)

2. 2022-23 ಸಾಲಿನಲ್ಲಿಇಲ್ಲಿಯವರೆಗೂ ಸಂಗ್ರಹವಾಗಿರುವ ಮೊತ್ತ ಹಾಗೂ

3. 2022-23 ನೇ ಸಾಲಿನ ಪ್ರಥಮ, ದ್ವಿತೀಯ, ಹಾಗೂ ತೃತೀಯ ಡಿಪ್ಲೋಮ ವಿದ್ಯಾರ್ಥಿಗಳಿಂದ ಮತ್ತು ಪ್ರಥಮ, ದ್ವಿತೀಯ, ತೃತೀಯ ಹಾಗೂ ನಾಲ್ಕನೇ ವರ್ಷದ ಸರ್ಕಾರಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಸಂಗ್ರಹಿಸಬಹುದಾಗಿರುವ ಎಲ್ಲಾ ಶುಲ್ಕಗಳ ಅಂದಾಜು ಮೊತ್ತವನ್ನೊಳಗೊಂಡಂತೆ ಕ್ರ. ಸಂ 1 ರಿಂದ 3 ರ ವರೆಗಿನ ಮೊತ್ತಕ್ಕೆ ಐ. ಡಿ. ಪಿ ಸಿದ್ಧಪಡಿಸುವುದು.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದ್ದೆ)**

16/09/2022

ನಿರ್ದೇಶಕರು

**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಜಂಟಿ ನಿರ್ದೇಶಕರು (ಆಡಳಿತ)
2. ಜಂಟಿ ನಿರ್ದೇಶಕರು (ಸಿಡಿಸಿ)
3. ಉಪ ನಿರ್ದೇಶಕರು (ಯೋಜನೆ)
4. ಸಹಾಯಕ ನಿರ್ದೇಶಕರು (ಎಸಿಎಂ)
5. ಲೆಕ್ಕಾಧಿಕಾರಿಗಳು (ಬಿಲ್ಸ್)
6. ಇ -ಗರ್ವನೆನ್ಸ್ ಸಂಯೋಜನಾಧಿಕಾರಿ-ಇಲಾಖಾ ವೆಬ್‌ಸೈಟ್ ನಲ್ಲಿ ಅಳವಡಿಸಲು.
7. ಆಯುಕ್ತರ ಆಪ್ತಶಾಖೆಗೆ
8. ನಿರ್ದೇಶಕರ ಆಪ್ತಶಾಖೆಗೆ
9. ಜಂಟಿ ನಿರ್ದೇಶಕರ (ಆಡಳಿತ) ಆಪ್ತ ಶಾಖೆಗೆ
10. ಕಛೇರಿ ಪ್ರತಿ